ಯುವಜನರ ಸಬಲೀಕರಣಕ್ಕೆ ಒತ್ತು ನೀಡುವುದು

80(675); ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಅ) ರಾಜ್ಯದಲ್ಲಿರುವ ಸುಮಾರು ಎರಡುವರೆ ಕೋಟಿ ಯುವಜನರ ಸಬಲೀಕರಣಕ್ಕಾಗಿ ಸರ್ಕಾರ ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವು;

ಆ) ಆಯವ್ಯಯ ಅನುದಾನದಲ್ಲಿ ಸಾಧಿಸಿದ ಗುರಿ–ಸಾಧನೆಯ ಕುರಿತಾದ ಪ್ರಗತಿಯ ವಿವರಗಳೇನು;

ಇ) ನಿರುದ್ಯೋಗಿ ಪದವೀಧರರಿಗೆ ತರಬೇತಿ ಕೇಂದ್ರ ಸ್ಥಾಪನೆ, ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಕೆ, ಕ್ರೀಡಾಪಟುಗಳಿಗೆ ಉತ್ತೇಜನ, ಗ್ರಾಮೀಣ ಯುವಜನತೆಗೆ ಆದ್ಯತೆ ನೀಡುವ ಯೋಜನಾ ಸೌಲಭ್ಯಗಳ ಅನುಷ್ಠಾನಕ್ಕೆ ಇಲಾಖೆಯು ಕೈಗೊಂಡ ಕ್ರಮಗಳೇನು;

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯದಲ್ಲಿರುವ ಕ್ರೀಡಾಪಟುಗಳೂ ಸೇರಿದಂತೆ ಯುವಜನರ ಸಬಲೀಕರಣಕ್ಕಾಗಿ ಕೇಳಕಾಣಿಸಿದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.

1. ಕರ್ನಾಟಕ ರಾಜ್ಯ ಯುವನೀತಿ ಅನುಷ್ಠಾನದ ಅಂಗವಾಗಿ ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

   ಅ) ವೃತ್ತಿ ಕೌಶಲ್ಯ ತರಬೇತಿ

   ಆ) ಜೀವನ ಕೌಶಲ್ಯ ತರಬೇತಿ

   ಇ) ನಮ್ಮೂರ ಶಾಲೆಗಾಗಿ ನಮ್ಮ ಯುವಜನರು– ತಮ್ಮೂರ ಶಾಲೆಗಾಗಿ ಗಣನೀಯ ಕೊಡುಗೆ ನೀಡುವ ಯುವ ಸಂಘಗಳನ್ನು

ತಾಲ್ಲೂಕಿಗೆ ಒಂದರಂತೆ ಗುರುತಿಸಿ ₹ 1.00 ಲಕ್ಷ ನಗದು ಪುರಸ್ಕಾರ ನೀಡುವ ಯೋಜನೆ.

ಈ) ಕುಟುಂಬ ಪ್ರಥಮ, ಕುಟುಂಬ ಸದಾ– ನಿಮ್ಹಾನ್ಸ್ ಸಹಯೋಗದೊಂದಿಗೆ ಯುವಜನರಿಗೆ ಮತ್ತು ಪೋಷಕರಿಗೆ ಆಪ್ತ ಸಮಾಲೋಚನಾ ಸೌಲಭ್ಯ ಒದಗಿಸುವ ಕಾರ್ಯಕ್ರಮ.

ಉ) ಯುವ ಸಬಲೀಕರಣ ಕೇಂದ್ರ– ಯುವಜನರ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಪೂರಕ ಮಾಹಿತಿ, ಜ್ಞಾನ, ತರಬೇತಿ ಸೌಲಭ್ಯಗಳನ್ನು ಒದಗಿಸಲು.

2. ಯುವಕ/ಯುವತಿಯರಿಗಾಗಿ ಕೆಳಕಾಣಿಸಿದ ವಿವಿಧ ತರಬೇತಿಗಳನ್ನು ಉಚಿತವಾಗಿ ಆಯೋಜಿಸಲಾಗುತ್ತಿದೆ.

ಅ) **'ಯುವ ಚೇತನಾ'**– ವ್ಯಕ್ತಿತ್ವ ವಿಕಸನ ತರಬೇತಿ

ಆ) **'ಯುವ ಪ್ರೇರಣಾ'**– ಸ್ವ–ಉದ್ಯೋಗ ಮಾರ್ಗದರ್ಶನ

ಇ) **'ಯುವ ಸಂವಹನಾ'**– ಸಂವಹನಾ ಕೌಶಲ್ಯ ತರಬೇತಿ

3. ಯುವಜನೋತ್ಸವ– ಯುವಜನರ ಶಾಸ್ತ್ರೀಯ ಪ್ರತಿಭೆ ಅನಾವರಣಕ್ಕೆ ಜಿಲ್ಲೆಯಿಂದ ರಾಷ್ಟ್ರ ಮಟ್ಟದವರೆಗಿನ ಸ್ಪರ್ಧೆ.

4. ಯವಜನ ಮೇಳ– ಯುವಜನರಲ್ಲಿನ ಜಾನಪದ ಪ್ರತಿಭೆ ಅನಾವರಣಕ್ಕೆ ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಸ್ಪರ್ಧೆ.

5. ಸ್ವಾಮಿ ವಿವೇಕಾನಂದ ರಾಜ್ಯ ಯುವ ಪ್ರಶಸ್ತಿ– ಸಂಘಟಿತ ಚಟುವಟಿಕೆಯ ಮೂಲಕ ಸಾಮಾಜಿಕ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುವ ಯುವಜನರನ್ನು ಮತ್ತು ಯುವ ಸಂಘಗಳನ್ನು ಗುರುತಿಸಿ, ಗೌರವಿಸಲು ನೀಡುವ ವಾರ್ಷಿಕ ಪ್ರಶಸ್ತಿ.

6. ಕ್ರೀಡಾಪಟುಗಳಿಗಾಗಿ 'ಯುವ ಕ್ರೀಡಾ ಸಂಜೀವಿನಿ' ವಿಮಾ ಯೋಜನೆ, ಕ್ರೀಡಾ ಸಾಧನೆಗೆ ನಗದು ಪುರಸ್ಕಾರ, ಅಪ್ರತಿಮ ಸಾಧಕರಿಗೆ ಏಕಲವ್ಯ ಪ್ರಶಸ್ತಿ, ಯುವ ಕ್ರೀಡಾ ಪ್ರತಿಭೆಗಳಿಗಾಗಿ ಕ್ರೀಡಾ ಶಾಲೆ ಮತ್ತು ನಿಲಯಗಳು. ಕ್ರೀಡಾ ವಿದ್ಯಾರ್ಥಿ ವೇತನ ಹಾಗೂ ಶೈಕ್ಷಣಿಕ ಶುಲ್ಕ ಮರುಪಾವತಿ. ಪ್ರತಿಭಾವಂತ ಕ್ರೀಡಾಪಟುಗಳಿಗೆ ಇಂಜಿನಿಯರಿಂಗ್, ವೈದ್ಯಕೀಯ ಮತ್ತಿತರ ವೃತ್ತಿಪರ ಶಿಕ್ಷಣಕ್ಕೆ ಕ್ರೀಡಾ ಮೀಸಲಾತಿ.

7. ಕರ್ನಾಟಕ ಸ್ಪೋರ್ಟ್ಸ್ ಅಕಾಡೆಮಿ ಫಾರ್ ಏಕ್ಸಲೆನ್ಸ್: ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಉನ್ನತ ಮಟ್ಟದ ಕ್ರೀಡಾ ತರಬೇತಿ ಪಡೆಯಲು ಧನಸಹಾಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

8. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ: ಯುವಜನರಲ್ಲಿ ಸಾಹಸ ಪ್ರವೃತ್ತಿಯನ್ನು ಉತ್ತೇಜಿಸಲು ಭೂ ಸಾಹಸ, ಜಲಸಾಹಸ ಮತ್ತು ವಾಯು ಸಾಹಸ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

9. ಗ್ರಾಮೀಣ ಕ್ರೀಡೋತ್ಸವ– 2014–15 ನೇ ಸಾಲಿನಿಂದ ಗ್ರಾಮೀಣ ದೇಸೀ ಕ್ರೀಡೆಗಳನ್ನು ಮತ್ತು ಕ್ರೀಡಾಪಟುಗಳನ್ನು ಉತ್ತೇಜಿಸಲು ಗ್ರಾಮೀಣ ಕ್ರೀಡೋತ್ಸವಗಳನ್ನು ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲಾಗುವುದು. ಪ್ರತಿ ತಾಲ್ಲೂಕಿಗೆ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ₹ 1.50 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ.

10. ರಾಜ್ಯದ ಯುವಜನರಿಗೆ ಮತ್ತು ಕ್ರೀಡಾಪಟುಗಳಿಗೆ ಅಗತ್ಯವಾದ ಜಾಗತಿಕ ಗುಣಮಟ್ಟದ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ಗಳು, ಹಾಕಿ ಟರ್ಫ್‌ಗಳು, ಈಜುಕೊಳಗಳು ಮತ್ತು ಸುಸಜ್ಜಿತ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ.

11. ಯುವನೀತಿ ಅನುಷ್ಠಾನದ ಅಂಗವಾಗಿ ಯುವಜನರ ದೈಹಿಕ ಆರೋಗ್ಯಕ್ಕೆ ಪೂರಕವಾದ ಸ್ಥಳಭ್ಯಗಳನ್ನೊಳಗೊಂಡ 'ಯುವ ಶಕ್ತಿ ಕೇಂದ್ರ'ಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸಲು 2014–15ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

ಆ) ಆಯವ್ಯಯ ಅನುದಾನದಲ್ಲಿ ಸಾಧಿಸಿದ ಗುರಿ ಸಾಧನೆಯ ಪ್ರಗತಿ ವಿವರಗಳನ್ನು ಅನುಬಂಧ–ಅ ನಲ್ಲಿ ಒದಗಿಸಿದೆ.

ಇ) **ಯುವಜನರ ಸಬಲೀಕರಣಕ್ಕಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು:**

1. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೇಂದ್ರ ಕಚೇರಿ ಇರುವ ರಾಜ್ಯ ಯುವ ಕೇಂದ್ರದಲ್ಲಿ ಈ ಕೆಳಕಾಣಿಸಿದ ಸೌಲಭ್ಯಗಳನ್ನು ಯುವಜನರಿಗಾಗಿ ಒದಗಿಸಲಾಗುತ್ತಿದೆ.

ಅ) **ಯವನಿಕಾ ಸಭಾಂಗಣವನ್ನು** ಯುವಜನತೆಯಲ್ಲಿ ಸುಪ್ತವಾಗಿರುವ ಕಲೆ, ಸಾಹಿತ್ಯ, ಸಂಗೀತ ಇತ್ಯಾದಿ ಸಾಂಸ್ಕೃತಿಕ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಹಾಗೂ ಯುವಜನತೆಗೆ ಸಂಬಂಧಿಸಿದ ಸಮಸ್ಯೆಗಳು, ಆಸಕ್ತಿ ವಿಷಯಗಳು ಹಾಗೂ ಹವ್ಯಾಸಗಳ ಬಗ್ಗೆ ಚಿಂತನ ಮಂಥನಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 300 ಆಸನ ಸಾಮರ್ಥ್ಯವುಳ್ಳ ಯುವನಿಕಾ ಸಭಾಂಗಣವನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಸುಸಜ್ಜಿತ **ಬ್ಯಾಡ್ಮಿಂಟನ್ ಹಾಲ್, ಹಾಬಿ ಹಾಲ್, ಚೆಸ್ ಹಾಲ್**ಗಳನ್ನು ಒಳಗೊಂಡಿದ್ದು, ಯುವ ಕ್ರೀಡಾಪಟುಗಳು ಉಪಯೋಗಕ್ಕೆ ಲಭ್ಯವಿದೆ.

ಆ) **ಗ್ರಂಥಾಲಯ:** ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಿಕೊಳ್ಳುತ್ತಿರುವ ಯುವಜನರಿಗೆ ಅನುಕೂಲವಾಗುವಂತಹ ಅಗಾಧ ಗ್ರಂಥಭಂಡಾರವುಳ್ಳ ಸುಸಜ್ಜಿತ ವಾಚನಾಲಯ ಮತ್ತು ಗ್ರಂಥಾಲಯವನ್ನು ಒಳಗೊಂಡಿರಯತ್ತದೆ.

ಒಳಾಂಗಣ ಚಟುವಟಿಕೆಗಳ ಅಡಿಯಲ್ಲಿ ನಿರುದ್ಯೋಗಿ ಯುವಜನರಿಗೆ ವೃತ್ತಿ ಆಧಾರಿತ ತರಬೇತಿಗಳಾದ ವಿಡಿಯೋಗ್ರಫಿ, ಫೋಟೋಗ್ರಫಿ, ಬ್ಯೂಟಿಷಿಯನ್ ತರಬೇತಿ, ವಾರ್ತಾ ವಾಚಕರ ಮತ್ತು ನಿರೂಪಕರ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

2. **ಯುವ ತರಬೇತಿ ಕೇಂದ್ರ:** ಬೆಂಗಳೂರಿನ ಬಳ್ಳಾರಿ ರಸ್ತೆಯಲ್ಲಿರುವ ವಿದ್ಯಾನಗರದ ಜಯಪ್ರಕಾಶ ನಾರಾಯಣ ರಾಷ್ಟ್ರೀಯ ಯುವ ಕೇಂದ್ರ ಹಾಗೂ ಮೈಸೂರು ರಸ್ತೆಯಲ್ಲಿರುವ ಕುಂಬಳಗೋಡು ಯುವಜನ ತರಬೇತಿ ಕೇಂದ್ರಗಳಲ್ಲಿ ಯುವಕ/ಯುವತಿಯರಿಗಾಗಿ ವಿವಿಧ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಅ) **'ಯುವ ಚೇತನಾ'** : ಗ್ರಾಮೀಣ ಮತ್ತು ನಗರ ಪ್ರದೇಶದ ಯುವಜನರಲ್ಲಿ ವ್ಯಕ್ತಿತ್ವ ಮತ್ತು ಹೊಸ ಕೌಶಲ್ಯಗಳನ್ನು ಬೆಳೆಸಿ ಅವರಲ್ಲಿ ಅರಿವು, ಆತ್ಮಸ್ಥೈರ್ಯಗಳನ್ನು ರೂಪಿಸಲು 'ಯುವ ಚೇತನಾ' ಎಂಬ ತರಬೇತಿಯನ್ನು ನೀಡಲಾಗುತ್ತಿದೆ.

ಆ) **'ಯುವ ಪ್ರೇರಣಾ'** : ಯುವಜನರನ್ನು ಸ್ವ-ಉದ್ಯೋಗಿಗಳನ್ನಾಗಿಸುವಂತೆ ಪ್ರೋತ್ಸಾಹಿಸಲು ಅವರಿಗೆ ಅಗತ್ಯವಾದ ತರಬೇತಿ ನೀಡಲು 'ಯುವ ಪ್ರೇರಣಾ' ಎಂಬ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ನಿರುದ್ಯೋಗಿ ಯುವಜನರಿಗೆ ಸ್ವಯಂ ಉದ್ಯೋಗ ಆರಂಭಿಸಲು ಯೋಜನಾ ವರದಿ ಸಿದ್ದಪಡಿಸುವುದು, ಬ್ಯಾಂಕ್ ಸಾಲ ಪಡೆಯಲು ತರಬೇತಿ ಜೊತೆಗೆ ಮಾರ್ಗದರ್ಶನ ನೀಡಲಾಗುತ್ತಿದೆ.

ಇ) **'ಯುವ ಸಂವಹನಾ'**– : ಯುವಜನರಲ್ಲಿ ನಾಯಕತ್ವ ಬೆಳವಣಿಗೆ, ವ್ಯಕ್ತಿತ್ವ ವಿಕಾಸ ಮತ್ತು ಸಂಘಟನೆ ಅರಿವನ್ನು ಮೂಡಿಸಲು ಅಗತ್ಯ ಸಂವಹನಾ ಕೌಶಲ್ಯಗಳನ್ನು ವೃದ್ದಿಗೊಳಿಸಲು

'ಯುವ ಸಂವಹನಾ' ಎಂಬ ತರಬೇತಿ ಶಿಬಿರವನ್ನು ನಡೆಸಲಾಗುತ್ತಿದೆ.

3. **ಯುವ ಸಬಲೀಕರಣ ಕೇಂದ್ರ:** ರಾಜ್ಯದಲ್ಲಿ 10 ಜಿಲ್ಲೆಗಳಲ್ಲಿ (ದಾವಣಗೆರೆ, ಚಿಕ್ಕಮಗಳೂರು, ಬೆಳಗಾಂ, ಶಿವಮೊಗ್ಗ, ಮೂಡಬಿದ್ರೆ, ಬೆಂಗಳೂರಿನ ಕುಂಬಳಗೋಡು, ವಿದ್ಯಾನಗರ, ಗುಲ್ಬರ್ಗಾ, ಮೈಸೂರು, ಚಿಕ್ಕಬಳ್ಳಾಪುರ) ಪ್ರಾಯೋಗಿಕವಾಗಿ ಯುವ ಸಬಲೀಕರಣ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅದರಡಿ ವೃತ್ತಿಕೌಶಲ್ಯ, ಜೀವನಕೌಶಲ್ಯ, ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

4. **ಯುವ ಕರ್ನಾಟಕ ಮಾಸಪತ್ರಿಕೆ:** ಯುವಜನರ ಭಾವನೆಗಳನ್ನು ಮತ್ತು ಚಿಂತನೆಗಳನ್ನು ಪ್ರತಿಬಿಂಬಿಸಲು ಹಾಗೂ ಯುವಜನರಿಗೆ, ಕ್ರೀಡಾಪಟುಗಳಿಗೆ ಅಗತ್ಯ ಮಾಹಿತಿಗಳನ್ನು ಒದಗಿಸಲು ಇಲಾಖೆಯು ಯುವ ಕರ್ನಾಟಕ ಮಾಸ ಮತ್ರಿಕೆಯನ್ನು ಪ್ರಕಟಿಸುತ್ತಿದೆ.

5. **ಸಿ.ಇ.ಟಿ.:** ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಸಿ.ಇ.ಟಿ. ಪ್ರವೇಶ ಪರೀಕ್ಷೆಯಲ್ಲಿ ಕ್ರೀಡಾ ಮೀಸಲಾತಿ ಅಡಿಯಲ್ಲಿ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ಮುಂತಾದ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

6. **ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.

7. **ಏಕಲವ್ಯ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಲಾದ ಕ್ರೀಡಾಪಟುಗಳಿಗೆ

ಏಕಲವ್ಯ ಪ್ರಶಸ್ತಿ ನೀಡಲಾಗುವುದು. ಈ ಪ್ರಶಸ್ತಿಯು ₹ 2.00 ಲಕ್ಷ ಸಮವಸ್ತ್ರ, ಕಂಚಿನ ಪ್ರತಿಮೆ ಒಳಗೊಂಡಿರುತ್ತದೆ.

8. **ಶೈಕ್ಷಣಿಕ ಶುಲ್ಕ ಮರುಪಾವತಿ:** ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಲಾದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.

9. **ವಿದ್ಯಾರ್ಥಿ ವೇತನ:** ರಾಜ್ಯ ಮಟ್ಟದಲ್ಲಿ ಪದಕ ವಿಜೇತರಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ₹ 10,000/– ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

10. **ಯುವ ಕ್ರೀಡಾ ಸಂಜೀವಿನಿ ವಿಮಾ ಯೋಜನೆ:** ರಾಜ್ಯ/ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ರಾಜ್ಯದ ಕ್ರೀಡಾಪಟುಗಳು/ಕ್ರೀಡಾಶಾಲೆ/ ವಸತಿನಿಲಯದ ಕ್ರೀಡಾ ವಿದ್ಯಾರ್ಥಿಗಳಿಗೆ ಕ್ರೀಡಾ ಸಂಜೀವಿನಿ ಯೋಜನೆಡಿ ವಿಮಾ ಸುರಕ್ಷೆಯನ್ನು ಒದಗಿಸಲಾಗುತ್ತಿದೆ.

11. **ಮಾಸಾಶನ ಯೋಜನೆ:** 50 ವರ್ಷ ಮೇಲ್ಪಟ್ಟ ಕಷ್ಟಪರಿಸ್ಥಿತಿಯಲ್ಲಿರುವ ವಾರ್ಷಿಕ ಆದಾಯ ₹ 20,000/– ಗಳಿಗಿಂತ ಕಡಿಮೆ ಇರುವ ಮಾಜಿ ಕುಸ್ತಿ/ಕ್ರೀಡಾಪಟುಗಳಿಗೆ ಮಾಸಾಶನವನ್ನು ನೀಡಲಾಗುತ್ತಿದೆ.

12. **ಕ್ರೀಡಾಶಾಲೆ/ನಿಲಯ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯದಲ್ಲಿ 2 ರಾಜ್ಯಮಟ್ಟ ಕ್ರೀಡಾಶಾಲೆ (ಕೊಡಗಿನ ಕೂಡಿಗೆ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ವಿದ್ಯಾನಗರದಲ್ಲಿ) 3 ಕ್ರೀಡಾ ನಿಲಯಗಳು ಮತ್ತು ಕಿರಿಯ ಕ್ರೀಡಾಪಟುಗಳಿಗಾಗಿ ಜಿಲ್ಲಾ ಮಟ್ಟದಲ್ಲಿ 23ಕ್ರೀಡಾ ಶಾಲೆಗಳನ್ನು ತೆರೆಯಲಾಗಿದೆ.

13. **ಪೈಕಾ ಯೋಜನೆ:** ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಕೇಂದ್ರ ಪುರಸ್ಕೃತ ಯೋಜನೆಯ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ (ಪೈಕಾ) ಯೋಜನೆಯಡಿ ಪ್ರತಿವರ್ಷ ಶೇ. 10% ರಷ್ಟು ಗ್ರಾಮ ಹಾಗೂ ಬ್ಲಾಕ್ ಮಟ್ಟಗಳಲ್ಲಿ ಪೈಕಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

14. **ಯುವ ಶಕ್ತಿ ಕೇಂದ್ರ:** ಯುವನೀತಿ ಅಡಿ ಯುವ ಶಕ್ತಿ ಕೇಂದ್ರಗಳನ್ನು ಸ್ಥಾಪಿಸಿ ಯುವಜನರ ದೈಹಿಕ ಆರೋಗ್ಯಕ್ಕೆ ಪೂರಕವಾಗಿ ಜಿಮ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.

15. **ಗರಡಿ ಮನೆ ನಿರ್ಮಾಣ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ:** ಗ್ರಾಮೀಣ ಕುಸ್ತಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಗರಡಿ ಮನೆ ನಿರ್ಮಾಣ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ಮಲ್ಟಿ ಜಿಮ್ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುತ್ತಿದೆ.

16. **ಕ್ರೀಡಾ ಶ್ರೇಷ್ಠತಾ ಕೇಂದ್ರ (Academy for Sports Excellence):** ಸ್ಥಾಪಿಸಿ ಕರ್ನಾಟಕದ ಕ್ರೀಡಾಪಟುಗಳಿಗೆ ಅಂತರ ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು, ವಿದೇಶದಲ್ಲಿ ಕ್ರೀಡಾ ತರಬೇತಿ ಪಡೆಯಲು ಧನ ಸಹಾಯ. ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಲು ದೈಹಿಕ ಸಾಮರ್ಥ್ಯ ಹೆಚ್ಚಿಸಲು ಪೌಷ್ಠಿಕ ಆಹಾರದ ಜೊತೆಗೆ ಅಗತ್ಯ ಕ್ರೀಡಾ ಉಪಕರಣಗಳಿಗೆ ಧನ ಸಹಾಯ ನೀಡಲಾಗುತ್ತಿದೆ.

ಅನುಬಂಧ–'ಅ'

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ 2013–14ನೇ ಸಾಲಿನ ಪ್ರಗತಿ ವಿವರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ 2013–14ನೇ ಸಾಲಿನಲ್ಲಿ ಯೋಜನಾ ಬಾಬಿನಲ್ಲಿ ₹ 9872.49 ಲಕ್ಷ ಆಯವ್ಯಯ ಹಂಚಿಕೆ ಮಾಡಲಾಗಿದ್ದು, ₹ 9565.48 ಲಕ್ಷ ವೆಚ್ಚ ಭರಿಸಲಾಗಿದೆ. ಯೋಜನೇತರ ಬಾಬಿನಲ್ಲಿ ₹ 1227.26 ಲಕ್ಷ ಆಯವ್ಯಯ ಹಂಚಿಕೆ ಮಾಡಲಾಗಿದ್ದು, ₹ 1220.74 ಲಕ್ಷ ವೆಚ್ಚ ಭರಿಸಲಾಗಿದೆ.

2013–14ನೇ ಸಾಲಿನ ಪ್ರಮುಖ ಸಾಧನೆಗಳ ಪಕ್ಷಿನೋಟ ಈ ಕೆಳಗಿನಂತಿದೆ.

1. ಕರ್ನಾಟಕ ರಾಜ್ಯ ಯುವನೀತಿ ಕಾರ್ಯಕ್ರಮಗಳ ಅನುಷ್ಠಾನದ ಅಂಗವಾಗಿ 2000 ಯುವಜನರಿಗೆ ಜೀವನ ಕೌಶಲ್ಯ ಮತ್ತು ವೃತ್ತಿ ಕೌಶಲ್ಯ ತರಬೇತಿ ನೀಡಲಾಗಿದೆ. 2013–14ನೇ ಸಾಲಿನ ನೂತನ ಯೋಜನೆಯಾದ ನಮ್ಮೂರ ಶಾಲೆಗೆ ನಮ್ಮೂರ ಯುವಜನರು ಯೋಜನೆಯಡಿ ಸ್ಥಳೀಯ ಶಾಲಾ ಅಭಿವೃದ್ಧಿ ಕಾರ್ಯದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ 25 ಯುವ ಸಂಘಗಳಿಗೆ ತಲಾ ₹ 1.00 ಲಕ್ಷಗಳ ನಗದು ಬಹುಮಾನ ನೀಡಲಾಗಿದೆ. ಯುವನೀತಿ ಅನುಷ್ಠಾನದ ಅಂಗವಾಗಿ ವಿವಿಧ ಕಾರ್ಯಕ್ರಮಗಳಿಗಾಗಿ ಒಟ್ಟು ₹ 367.53 ಲಕ್ಷ ವೆಚ್ಚ ಭರಿಸಲಾಗಿದೆ.

2. ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಸಾಧನೆ ಮಾಡಿದ 157 ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ನೀಡಲಾಗಿದೆ. 17 ಅತ್ಯುತ್ತಮ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ಮತ್ತು 4 ತರಬೇತುದಾರರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಈ ಬಾಬ್ತು 2013–14ನೇ ಸಾಲಿನಲ್ಲಿ 239.80 ಲಕ್ಷ ವೆಚ್ಚ ಭರಿಸಲಾಗಿದೆ.

3. ಯುವ ಕ್ರೀಡಾ ಸಂಜೀವಿನಿ ಯೋಜನೆಯಡಿ ₹ 25.00 ಲಕ್ಷಗಳ ವೆಚ್ಚದಲ್ಲಿ ರಾಜ್ಯದ 5186 ಕ್ರೀಡಾಪಟುಗಳಿಗೆ ಉಚಿತ ವಿಮಾ ಸುರಕ್ಷೆ ಕಲ್ಪಿಸಲಾಗಿದೆ.

4. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡಾಪಟುಗಳ ಅನುಕೂಲಕ್ಕಾಗಿ 23 ಕಿರಿಯ ಕ್ರೀಡಾಪಟುಗಳ ಕ್ರೀಡಾಶಾಲೆ 5 ಹಿರಿಯ ಕ್ರೀಡಾಪಟುಗಳ ಕ್ರೀಡಾನಿಲಯ ಮತ್ತು 2 ಹಿರಿಯ ಕ್ರೀಡಾಪಟುಗಳ ಕ್ರೀಡಾ ವಸತಿನಿಲಯಗಳಲ್ಲಿ ನುರಿತ ಹಿರಿಯ ತರಬೇತಿದಾರರಿಂದ ವೈಜ್ಞಾನಿಕ ತರಬೇತಿ ನೀಡುತ್ತಿದ್ದು ಕಳೆದ 1 ವರ್ಷದಲ್ಲಿ ಒಟ್ಟು 1600 ಕ್ರೀಡಾಪಟುಗಳು ತರಬೇತಿ ಪಡೆದಿರುತ್ತಾರೆ. ಕ್ರೀಡಾಪಟುಗಳ ಊಟ–ತಿಂಡಿ, ಕ್ರೀಡಾ ಸಾಮಾಗ್ರಿ, ಪ್ರೋತ್ಸಾಹಧನ, ಕ್ರೀಡಾಪಟುಗಳಿಗೆ ಟಿ.ಎ./ಡಿ.ಎ ನೀಡಲು 2013–14ನೇ ಸಾಲಿನಲ್ಲಿ ₹ 990.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಕ್ರೀಡಾಪಟುಗಳು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿವಿಧ ಪಂದ್ಯಾವಳಿಯಲ್ಲಿ ಬಾಗವಹಿಸಿ ಒಟ್ಟು 527 ಪದಕ ಪಡೆದಿರುತ್ತಾರೆ.

5. ಕರ್ನಾಟಕ ಕ್ರೀಡಾ ಪ್ರಾಧಿಕಾರದ ವತಿಯಿಂದ ಅನುದಾನ ಪಡೆಯುವ ಕ್ರೀಡಾ ಸಂಸ್ಥೆಗಳ ಮೂಲಕ 60ಸಾವಿರ ಯುವಕ/ಯುವತಿಯರು ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಿರುತ್ತಾರೆ.

6. ರಾಜ್ಯದ ಪ್ರತಿಭಾವಂತ ಅಂತರಾಷ್ಟ್ರೀಯ ಕ್ರೀಡಾಪಟುಗಳಿಗೆ ವಿದೇಶಗಳಲ್ಲಿ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ವಿಮಾನ ಪ್ರಯಾಣ ವೆಚ್ಚ ಮರುಪಾವತಿ ಮಾಡಲಾಗುತ್ತಿದೆ. ಈ ಸೌಲಭ್ಯ ಪಡೆದ ಕ್ರೀಡಾಪಟುಗಳಲ್ಲಿ ಅರವಿಂದ ಭಟ್ (ಬ್ಯಾಡ್ಮಿಂಟನ್), ತೇಜ್ ಕುಮಾರ್ (ಚೆಸ್), ಚಿತ್ರ ಮಫಿಮೈರಾಜ್ (ಸ್ನೂಕರ್), ಆನಂದ್ ಕುಮಾರ್ (ಪ್ಯಾರಾ ಬ್ಯಾಡ್ಮಿಂಟನ್) ಮೊದಲಾದ ಹೆಸರಾಂತ ಕ್ರೀಡಾಪಟುಗಳು ಒಳಗೊಂಡಿದ್ದಾರೆ.

7. 2013–14ನೇ ಸಾಲಿನಲ್ಲಿ ಶಿವಮೊಗ್ಗ ಮತ್ತು ಮಂಗಳೂರು, ಮೈಸೂರು, ಉಡುಪಿ, ಗುಲ್ಬರ್ಗಾ, ಧಾರವಾಡ ಹಾಗೂ ಹೊಸದುರ್ಗಗಳಲ್ಲಿ ಆಧುನಿಕ ಸಿಂಥೆಟಿಕ್ ಅಥ್ಲೆಟಿಕ್ ಟ್ರಾಕ್, ಬಳ್ಳಾರಿಯಲ್ಲಿ ಫುಟ್ಬಾಲ್ ಸಿಂಥೆಟಿಕ್ ಟರ್ಫ್, ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ಹಾಗೂ

ಕೊಡುಗು ಜಿಲ್ಲೆಯ ಪೊನ್ನಂಪೇಟೆಯಲ್ಲಿ ಹಾಕಿ ಸಿಂಥೆಟಿಕ್ ಟರ್ಫ್ ಅಳವಡಿಸಲಾಗಿದೆ. ಬಳ್ಳಾರಿಯ ಹೊಸಪೇಟೆಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ. ಕೊಡಗು ಜಿಲ್ಲೆಯ ಮಡಿಕೇರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಒಳಾಂಗಣ ಈಜು ಕೊಳವನ್ನು ನಿರ್ಮಿಸಲಾಗಿದೆ. ಮೈಸೂರು ಮತ್ತು ಉಡುಪಿ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾ ವಸತಿ ನಿಲಯಗಳನ್ನು ನಿನರ್ಮಿಸಲಾಗಿದೆ. ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ 4 ಅಂಕಣಗಳುಳ್ಳ ಬ್ಯಾಡ್ಮಿಂಟನ್ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ.

8. ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿ ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಕನಾಟಕದ ಕ್ರೀಡಾಪಟುಗಳು ಒಟ್ಟು 12 ಚಿನ್ನ, 22 ಬೆಳ್ಳಿ, 18 ಕಂಚಿನ ಪದಕಗಳನ್ನು ಪಡೆದಿರುತ್ತಾರೆ.

9. ಕರ್ನಾಟಕ ಯುವಜನರು ಪಂಜಾಬ್‌ನ ಲೂಧಿಯಾನದಲ್ಲಿ ನಡೆದ ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಿ ವಿವಿಧ ಸ್ಪರ್ಧೆಗಳಲ್ಲಿ 4 ಬಹುಮಾನಗಳನ್ನು ಪಡೆದಿರುತ್ತಾರೆ. ಶ್ರೀ ಗಂಗಾಧರ ಅರಳಿ, ಧಾರವಾಡ ಇವರು ರಾಷ್ಟ್ರೀಯ ಯುವ ಪ್ರಶಸ್ತಿ ಪಡೆದಿರುತ್ತಾರೆ.

ಶ್ರೀ ಎನ್.ಎ. ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ವಿಷಯವನ್ನು ಬಹಳ ಗಂಭೀರವಾಗಿ ನಾವೆಲ್ಲರೂ ನೋಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಹೆಚ್ಚು ಕಡಿಮೆ ಎರಡೂವರೆ ಕೋಟಿ ಯುವಕರಿದ್ದಾರೆ. ಸರ್ಕಾರ ಕೇವಲ 98 ಕೋಟಿ ರೂಪಾಯಿಗಳನ್ನು ಮಾತ್ರ ಬಜೆಟ್‌ನಲ್ಲಿಟ್ಟಿದೆ, ಆದರೆ 95 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದಲ್ಲದೆ non-plan ನಲ್ಲಿ 12 ಕೋಟಿ ರೂಪಾಯಿಗಳು, ಎರಡೂವರೆ ಕೋಟಿ ಜನಸಂಖ್ಯೆಗೆ ನಾವು ಕೇವಲ 110 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ಈ ವರ್ಷ ನಮ್ಮ ಬಜೆಟ್ ಇರುವುದು 01 ಲಕ್ಷ 35 ಸಾವಿರ ಕೋಟಿ ರೂಪಾಯಿಗಳು. ನಿಜವಾಗಿಯೂ

ನಾವು ಯುವಕರಿಗೆ ಕೊಡಬೇಕಾದ ವ್ಯವಸ್ಥೆಯನ್ನು ಕೊಡುತ್ತಿಲ್ಲವೆಂದು ಮಾನ್ಯ ಮಂತ್ರಿಗಳ ಬಳಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸುಮಾರು ಸ್ಕೀಮ್‌ಗಳನ್ನು ಕೊಟ್ಟಿದ್ದಾರೆ ನಾಲ್ಕು ಪೇಜ್ ಉತ್ತರವಿದೆ. ಆದರೆ ಈ ಸ್ಕೀಮ್‌ಗಳಲ್ಲಿ ಕೇವಲ ಎರಡು–ಎರಡೂವರೆ ಸಾವಿರ ಜನರಿಗೆ ಮಾತ್ರ ಉಪಯೋಗವಾಗಿದೆ, ಅವರಿಗೆ ಮಾತ್ರ ಸಹಾಯವಾಗಿದೆಯೆಂದು ಉತ್ತರದಲ್ಲಿ ಹೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಎರಡೂವರೆ ಕೋಟಿ ಯುವಕರಿದ್ದಾರೆ, ಇವರೇ ಮುಂದಿನ ಪೀಳಿಗೆ. ಇದನ್ನು ಗಂಭೀರವಾಗಿ ತೆಗೆದುಕೊಂಡು ಇದಕ್ಕೆ ಇನ್ನಷ್ಟು budget allocation ಕೊಟ್ಟು ಯುವಕರಿಗೆ ಬೇಕಾದಷ್ಟು ಕಾರ್ಯಕ್ರಮಗಳನ್ನು ಕೊಡಬೇಕು. ಅದರಲ್ಲಿ ವಿಶೇಷವಾಗಿ sports personalities ಗೆ ಮೊದಲೆಲ್ಲಾ ITI, HAL, HMT ಈ ರೀತಿ public limitedನಲ್ಲಿ ಕ್ರೀಡಾಪಟುಗಳನ್ನು ತೆಗೆದುಕೊಳ್ಳುತ್ತಿದ್ದರು ಆದರೆ ಇವತ್ತು ಯಾವ corporate sector ನಲ್ಲೂ ಕೂಡ ಅವರಿಗೆ ವಿಶೇಷ ಸ್ಥಾನ ಸಿಗುತ್ತಿಲ್ಲ. ತಾವು ಅದನ್ನು ಪರಿಶೀಲಿಸಬೇಕು.

ಅಧ್ಯಕ್ಷರು:– ತಾವು ಪ್ರಶ್ನೆ ಕೇಳಿ ಚರ್ಚೆ ಮಾಡುತ್ತಾ ಕೂರಬೇಡಿ.

ಶ್ರೀ ಎನ್.ಎ. ಹ್ಯಾರಿಸ್:– ಅಧ್ಯಕ್ಷರೆ, ಇದು ಚರ್ಚೆಯಲ್ಲ ಪ್ರಶ್ನೆಯಲ್ಲ ಪ್ರಶ್ನೆಗೆ ಇವರು ಉತ್ತರದಲ್ಲಿ ಕೊಟ್ಟಿರುವುದನ್ನೇ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು:– ಇಷ್ಟು ದೀರ್ಘವಾದ ಉತ್ತರವನ್ನು ನಿಮಗೋಸ್ಕರ ಕೊಟ್ಟಿದ್ದಾರೆ. ಅದರಲ್ಲೇನಾದರೂ ಬಿಟ್ಟು ಹೋಗಿರುವ ವಿಷಯಗಳಿದ್ದರೆ ಕೇಳಿ.

ಶ್ರೀ ಎನ್.ಎ. ಹ್ಯಾರಿಸ್:– ಯುವಕರ ಬಗ್ಗೆ ಮಾತನಾಡುವುದಕ್ಕೆ ಒಂದೆರಡು ನಿಮಿಷ ಸಮಯಾವಕಾಶವನ್ನು ಕೊಡಿ ಅವರು ಉತ್ತರ ಹೇಳಲಿ.

ಶ್ರೀ ಕೆ. ಅಭಯಚಂದ್ರ:– ಹ್ಯಾರಿಸ್‌ರವರು ಪ್ರಸ್ತಾಪಿಸಿರುವ ಪ್ರಶ್ನೆಗೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಯುವಜನ ಖಾತೆಗೆ budget allocation ಕೊಟ್ಟಿರುವುದು 104 ಕೋಟಿ ರೂಪಾಯಿಗಳು. ಇದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಪೂರಕ ಅಂದಾಜಿನ ಮೇಲೆ discussion ಇದ್ದು, ಅದರಲ್ಲಿ ಪುನಃ ತಾವು ಬಹಳ ಗಂಭೀರವಾಗಿ ಚರ್ಚೆ ಮಾಡಿ ನಮ್ಮ ಅರ್ಥ ಸಚಿವರು ಹೆಚ್ಚು ಹಣವನ್ನು

ಒದಗಿಸಿದರೆ ಹೆಚ್ಚು ಅರ್ಥಗರ್ಭಿತವಾಗಿ ಯುವಜನ ಖಾತೆಯನ್ನು ನಿರ್ವಹಣೆ ಮಾಡುವ ಕೆಲಸವನ್ನು ನಮ್ಮ ಇಲಾಖೆ ಮಾಡುತ್ತದೆ.

ಅಧ್ಯಕ್ಷರು:– ಆಯಿತು. ಸಾಕು.

ಶ್ರೀ ಎನ್.ಎ. ಹ್ಯಾರಿಸ್:– ಅಧ್ಯಕ್ಷರೆ, ನೀವು ಯುವಕರಾಗಿ ಇಲ್ಲಿಗೆ ಬಂದಿರುವುದಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, next budget ನಲ್ಲಿ ಹೆಚ್ಚು allocation ಕೊಡಿ ಎಂದು ನಾವು ಅವರಲ್ಲಿ request ಮಾಡೋಣ. ನಮ್ಮ sports personalities ಗೆ corporate sector ನಲ್ಲಿ ಅವರಿಗೆ ಕೆಲಸ ಸಿಗುವುದಕ್ಕೆ ಯುವಕರಿಗೆ ಅನುಕೂಲ ಮಾಡಿಕೊಡಬೇಕು.

ಅಧ್ಯಕ್ಷರು:– ಸಾಕು, ಸಾಕು. ಮೊದಲು ಪ್ರಶ್ನೆ ಕೇಳುವುದನ್ನು ಕಲಿತುಕೊಳ್ಳಿ.

ಶ್ರೀ ಎನ್.ಎ. ಹ್ಯಾರಿಸ್:– ಅವರಿಗೆ ಬಹಳ ಅನ್ಯಾಯವಾಗುತ್ತಿದೆಯೆಂದು ನಾನು ಇಲ್ಲಿ ಹೇಳದಿದ್ದರೆ ಮತ್ತೆಲ್ಲಿ ಹೇಳುವುದೆಂದು ತಾವೇ ಹೇಳಿ?

ಶ್ರೀ ಕೆ. ಅಭಯಚಂದ್ರ:– ಈಗಾಗಲೆ 12 ಗಂಟೆಗೆ medical seat ಗೆ ಅವಕಾಶ ಕಲ್ಪಿಸಿಕೊಟ್ಟಿದ್ದು ಸುಮಾರು 100 ಜನ ವಿದ್ಯಾರ್ಥಿಗಳಿಗೆ ಇಂಜಿನಿಯರ್ ಕಾಲೇಜು ಪ್ರವೇಶಕ್ಕೆ ಕೂಡ ಅವಕಾಶ ಮಾಡಿದೆ. ಬೇರೆ ಬೇರೆ ರೀತಿಯಲ್ಲಿ ಯುವಕರಿಗೆ ಪ್ರೋತ್ಸಾಹ ಕೊಡುವ ಕೆಲಸವಾಗುತ್ತಿದೆ. ತಮ್ಮ ನೋವು ನನಗೆ ಅರ್ಥವಾಗಿದೆ. ಪೂರಕ ಚರ್ಚೆಯ ಸಂದರ್ಭದಲ್ಲಿ ಹೆಚ್ಚು ವಿಸ್ತಾರವಾಗಿ ಮಾತನಾಡುವುದಕ್ಕೆ ಅವಕಾಶವಿದೆ.

ಅಧ್ಯಕ್ಷರು:– ಪ್ರಶ್ನೋತ್ತರ ಅವಧಿ ಮುಕ್ತಾಯವಾಯಿತು.